ಜಲ ಮಂಡಲಿಗೆ ನೀರು ಸರಬರಾಜು ಬಾಕಿ ಹಣದ ಬಗ್ಗೆ

೧೮೬೬. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರಪಾಲಿಕೆಯಿಂ ರಾಜ್ಯ ಜಲ ಮಂಡಲಿಗೆ ನೀರು ಸರಬರಾಜು ಬಾಬ್ತು ಕೊಡಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು ?

ಆ) ಎಷ್ಟು ವರ್ಷಗಳಿಂದ ಈ ಬಾಕಿ ಹಣವನ್ನು ಉಳಿಸಿಕೊಂಡು ಬರಲಾಗಿದೆ ? ಆ ಕಾಲದ ಆಡಳಿತಾಧಿಕಾರಿಗಳು ಯಾರ್ಯಾರು ?

ಇ) ಮೈಸೂರು ನಗರಕ್ಕೆ ಜುನಾಯಿತ ನಗರಪಾಲಿಕೆ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಅದು ಎಷ್ಟು ವರ್ಷಗಳ ಕಾಲ ಆಡಳಿತಾಧಿಕಾರಿಗಳ ಅಧೀನದಲ್ಲಿತ್ತು. ಆ ಅವಧಿಯಲ್ಲಿ ಈ ಬಾಕಿ ಉಳಿಯಲು ಕಾರಣಗಳಾವುವು ಆ ಪೈಕಿ ಪಾವತಿ ಮಾಡಿರುವ ಹಣವೆಷ್ಟು ?

ಈ) ಬಾಕಿ ಉಳಿಸಿಕೊಂಡು ಬಂದಿರುವುದರಿಂದ ಅಧಿಕಾರಿಗಳ ಕರ್ತವ್ಯ ಲೋಪವಾಗಲಿಲ್ಲವೇ ಈ ಬಗ್ಗೆ ತಾವು ಯಾವ ಕ್ರಮವನ್ನೂ ಇಲ್ಲಿಯವರೆಗೆ ಏಕೆ ಕೈಗೊಂಡಿಲ್ಲ ?

ಉ) ಈ ಬಗ್ಗೆ ಸರ್ಕಾರದವರು ಕ್ರಮ ಕೈಗೊಂಡಿದ್ದರೆ ಅವುಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೧) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪ್ರಕಾರ ಮಾರ್ಚ್ ೧೯೮೮ ರವರೆಗೆ ಬಾಕಿ ಹಣ ರೂ. ೩೬೫.೨೩ ಲಕ್ಷ

೨) ಮೈಸೂರು ಮಹಾನಗರ ಪಾಲಿಕೆಯು ಆಯುಕ್ತರ ವರದಿ ಪ್ರಕಾರ ೩೧-೩-೧೯೮೮ರ ತನಕ ಕೊಡಬೇಕಾದ ಬಾಕಿ ಹಣ ರೂ. ೨.೯೭,೨೦೬-೪೩ (೨೯೭.೨೫) ಲಕ್ಷ

ಆ) ೧೯೭೫ ರಿಂದ ಆಡಳಿತಾಧಿಕಾರಿಗಳು ಈ ಕೆಳಕಂಡಂತೆ,

ಡಿ. ಜೆ. ಬಾಲರಾಜ್	೬-೧-೭೩ ರಿಂದ ೩೧-೫-೭೩
ಆರ್. ಸಂಪತ್‌ಕುಮಾರನ್	೩೧-೫-೭೩ ರಿಂದ ೧೨-೧-೭೪
ಎ. ಮೋಹನ್‌ದಾಸ್ ಮೋಸಸ್	೧೨-೧-೭೪ ರಿಂದ ೨೪-೧-೭೪
ಎಂ. ಎ. ಎಸ್. ರಾಜನ್	೨೪-೧-೭೪ ರಿಂದ ೨೯-೫-೭೪
ಆರ್ ಸಂಪತ್‌ಕುಮಾರನ್	೨೯-೫-೭೪ ರಿಂದ ೧೨-೬-೭೪
ಸ್ವಾಮುಯಿಲ್ ಅಪ್ಪಾಜಿ	೧೨-೬-೭೪ ರಿಂದ ೩೧-೧೦-೭೪
ಕೆ. ಎಸ್. ಎನ್. ಮೂರ್ತಿ	೩೧-೧೦-೭೪ ರಿಂದ ೨೩-೧೧-೭೪
ಹೆಚ್. ಮಂಹಾರಂದ್ರಯ್ಯ	೨೩-೧೧-೭೪ ರಿಂದ ೧೦-೨-೭೫
ಸ್ವಾಮುಯಿಲ್ ಅಪ್ಪಾಜಿ	೧೦-೨-೭೫ ರಿಂದ ೨-೬-೭೫
ಎ. ಎಸ್. ಮೇಲ್ಲೋಟಿ	೨-೬-೭೫ ರಿಂದ ೧೦-೧೧-೭೬
ಟಿ. ಎಸ್. ಮುದ್ದಪ್ಪ	೧೦-೧೧-೭೬ ರಿಂದ ೧೩-೮-೭೭
ಜಯಂಕುಮಾರ್ ಅನಗೋಳ	೧೩-೮-೭೭ ರಿಂದ ೪-೯-೭೮
ಎಂ. ಚಿತ್ತರಂಜನ್‌ದಾಸ್	೪-೯-೭೮ ರಿಂದ ೭-೧೦-೭೮
ಜಯಕುಮಾರ್ ಅನಗೋಳ	೭-೧೦-೭೮ ರಿಂದ ೩೧-೮-೭೯
ಹೆಚ್. ಕೆ. ಶಿವಾನಂದ	೩೧-೮-೭೯ ರಿಂದ ೧೬-೯-೮೦
ಎಂ. ಬಿ. ಪ್ರಕಾಶ್	೧೬-೯-೮೦ ರಿಂದ ೨೭-೪-೮೩
ಪಿ. ಜಿ. ಪುರಾಣಿಕ್	೨೭-೪-೮೩ ರಿಂದ ೭-೯-೮೩

೫) ೧೦ ವರ್ಷ ೮ ತಿಂಗಳು

ನಗರಪಾಲಿಕೆಯ ಆರ್ಥಿಕ ಮಂಗ್ಗಟ್ಟಿನಿಂದ ಬಾಕಿ ಉಳಿದಿದೆ.

೧೯೭೩–೭೪ ರಿಂದ ೧೯೮೩–೮೪ ರವರೆಗೆ ಪಾವತಿ ಮಾಡಿದ ಹಣ ರೂ. ೩,೧೨,೯೯,೭೮೪–೧೫.

ಈ) ಕರ್ತವ್ಯ ಲೋಪ ಕಂಡುಬರುವುದಿಲ್ಲ.

ಉ) ಕ್ರಮ ಉದ್ಭವಿಸುವುದಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೇ, ಆಡಳಿತಾಧಿಕಾರಿಗಳು ಅವರ ಕೈಗೆ ಈ ಆಡಳಿತವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಮೈಸೂರು ಸಿಟಿ ಮುನಿಸಿಪಾಲಿಟಿಯು ಸಾಲ ಏನಾದರೂ ಇತ್ತೇ ? ಒಂದುವೇಳೆ ಸಾಲ ಇದ್ದಿದ್ದರೆ ಎಷ್ಟಿತ್ತು ? ಅಲ್ಲಿಂದೀಚೆಗೆ ಮೈಸೂರು ಸಿಟಿ ಮುನಿಸಿಪಾಲಿಟಿಯ ಆಡಳಿತಾಧಿಕಾರಿಗಳ ಸ್ವಾಧೀನಕ್ಕೆ ಬಂದಮೇಲೆ ಎಷ್ಟು ಸಾಲ ಉಳಿಕೆಯಾಯಿತು ? ಯಾವ ಬಾಬಿನಿಂದ ಉಳಿಕೆಯಾಯಿತು ? ನೀರಿನ ಕಂದಾಯ ವಸೂಲ್ಮಾಡದೆ ಸಾಲ ಉಳಿಕೆ ಆಯಿತೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಒಟ್ಟು ೧೯೮೮ ರವರೆಗೆ ನೀರಿನ ಬಾಬ್ತು ಮಂಡಳಿಗೆ ಕೊಡಬೇಕಾದುದು ಸುಮಾರು ೮.೨೮ ಕೋಟಿ ರೂಪಾಯಿಗಳು. ಇದರಲ್ಲಿ ಆಡಳಿತಾಧಿಕಾರಿಗಳು ೧೯೭೪–೭೫ ರಿಂದ ೧೯೮೩–೮೪ ರವರೆಗೆ ೩.೧೩ ಕೋಟಿ ರೂಪಾಯಿಗಳನ್ನು ತೀರಿಸಿದ್ದಾರೆ. ಆದಾದಮೇಲೆ ಆಯ್ಕೆಯಾದ ಸಮಿತಿಯೂ ೨.೨ ಕೋಟಿ ರೂಪಾಯಿಗಳನ್ನು ತೀರಿಸಿದೆ. ಇದೂ ಅಲ್ಲದೆ ಇನ್ನೂ ೩೯ ಲಕ್ಷ ರೂಪಾಯಿಗಳನ್ನು ನಗರ ಪಾಲಿಕೆಯು ಕೊಡಬೇಕಾದ್ದು ಇದೆ. ಇದರಲ್ಲಿ ಒಂದು ಏನೆಂದರೆ ಮೈಸೂರು ನಗರದ ನೀರಿನ ದರವನ್ನು ತೆಗೆದುಕೊಂಡರೆ ಇಡೀ ದೇಶದಲ್ಲಿ ಯಾವುದೇ ನಗರಕ್ಕೆ ಹೋಲಿಕೆ ಮಾಡಿದರೂ ಇದು ಅತ್ಯಂತ ಕಡಿಮೆ.

ನಾವು ಬಂದ ಮೇಲೆ ಒಂದು ಆರು ತಿಂಗಳುಗಳಲ್ಲಿಯೇ ಪರಿಷ್ಕರಣ ಮಾಡಿ ಒಂದು ದರವನ್ನು ಹಾಕಿದ್ದೇವೆ ಇದರಿಂದ ಮುಂದಿನ ವರ್ಷದಿಂದ ಅವರ ಅಂದಾಜು ಸುಮಾರು ೨ ಕೋಟಿ ೩೦ ಲಕ್ಷ ರೂಪಾಯಿಗಳಷ್ಟು ಬರುವುದಕ್ಕೆ ಆಗುತ್ತದೆ. ಇದುವರೆಗೆ ಪರಿಷ್ಕರಣ ಮಾಡದಿರುವುದಕ್ಕೆ ಕಾರಣ ವೇನೆಂದರೆ ಆಡಳಿತಾಧಿಕಾರಿ ಇದ್ದಾಗಲೂ ಮಾಡಲಿಲ್ಲ. ಐದು ವರ್ಷಗಳಲ್ಲಿ ಆಯ್ಕೆ ಸಮಿತಿ ಬಂದ ಮೇಲೆ ಎರಡು ವರ್ಷಗಳಿಂದ ಪ್ರಾರಂಭ ಮಾಡಿದ್ದಾರೆ. ಹಿಂದೆ ಆಡಳಿತಾಧಿಕಾರಿಗಳ ಕಾಲದಲ್ಲಿ ೧೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಪರಿಷ್ಕರಣ ಮಾಡದೆ ನಾಗರೀಕರಿಂದ ಹಣವನ್ನು ವಸೂಲು ಮಾಡದಿರುವುದು ಇಲ್ಲಿ ವ್ಯಕ್ತವಾಗುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೇ, ನೀರು, ಕಂದಾಯ ಆಡಳಿತಾಧಿಕಾರಿಯವರು ಇದ್ದಾಗ ವಸೂಲು ಮಾಡಲಿಲ್ಲ ? ಇದು ನಿಜವೇ ಸುಳ್ಳೇ ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಎರಡನೆಯದಾಗಿ ಆಡಳಿತಾಧಿಕಾರಿಗಳು ಬರುವುದಕ್ಕೆ ಮೊದಲು ಏನಾದರೂ ಸಾಲ ಇತ್ತೇ ಏನ್ನುವ ಪ್ರಶ್ನೆಗೂ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಎರಡಕ್ಕೂ ಸರಿಯಾದ ಉತ್ತರವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೆ, ೧೯೭೪–೭೫ಕ್ಕೆ ಮುಂಡಲಿ ಬಂದಿದೆ. ಆಡಳಿತಾಧಿಕಾರಿಗಳ ಒಂದು ಆಡಳಿತ ಪ್ರಾರಂಭವಾದುದು ಅಲ್ಲಿಂದಲೇ. ಆದ್ದರಿಂದ ಹಿಂದಿನ ಮಾಹಿತಿ ನನ್ನಲ್ಲಿ ಇಲ್ಲ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಆದಾಯ ದೃಢೀಕರಣ ಪತ್ರ

೧೯೭೩. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಡ್ಕೋ ಮನೆಗಳನ್ನು ಮಂಜೂರು ಮಾಡುವಾಗ ಆದಾಯ ದೃಢೀಕರಣ ಪತ್ರ ೨೦೦೦ ರೂ. ಇರಬೇಕಾಗಿರುವುದು ನಿಜವೇ ?